ಕೊಲಾರ, ಬೇತಮಂಗಲ, ಮಾಲೂರು, ಮುಳಬಾಗಲ್, ಶ್ರೀನಿವಾಸಪುರ.

2 ಕೊಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮೆಸ್ಟರ್ S. ವೆಂಕಟವರದಿ ಸ್ಯಂಗಾರ್‌ಯವರು ಕೊಲಾರ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಸಬ್ ಡಿವಿಜಿಗೆ ಹಾಕಲ್ಪಟ್ಟಿರುತ್ತಾರೆ. ಮತ್ತು, ಆ ಕೆಲಸದಬಗ್ಯೆ, 1872ನೇ ಇಸವಿ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ್ 28ನೇ ಸೆಕ್ಷನ್ನುಲ್ಲಿ ನಮೂದಿಸಲ್ಪಟ್ಟ ಜಾಸ್ತೀ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ. 433. ತಾರೀಖು 15ನೇ ಮಾರ್ಚೀ 1877.

ಚಿತ್ರದುರ್ಗ ಡಿಸ್ಟ್ರಿಕ್ಟು ದಾವಣಗೆರೆ ತಾಲ್ಲೂಕು ಅಮಲ್ದಾರ್ ಶಾಮೈಯ್ಯಂಗಾರಿಗೆ 1872ನೇ ಇಸವಿ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ್ 19ನೇ ಸೆಕ್ಷನ್ ಅರ್ಥರೀತ್ಯಾ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳೂ, 23 (*a*) ಸೆಕ್ಷನ್ 1 ಮತ್ತು 2ನೇ ಕ್ಲಾಸ್‌ಗಳಲ್ಲಿ ನಮೂದಿಸಲ್ಪಟ್ಟಿರುವ ಜಾಸ್ತೀಅಧಿಕಾರಗಳೂ ಕೊಡಲ್ಪಟ್ಟಿರುತ್ತೆ. ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಕನಡಭಾಷೆಯಲ್ಲಿ ಸ್ವತಃ ತೆಗದುಕೊಳ್ಳಲಿಕ್ಕೆ ಜರ್ಜ ಆಕ್ಟು 33ನೇ ಸೆಕ್ಷನ್ ಅನುಸರಿಸಿ ಅಪ್ಪಣೆ ಸಹಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮಿಲಿಟರಿ ಇಲಾಖೆ.

ನಂ. 434. ತಾರೀಖು 9ನೇ ಮಾರ್ಚಿ 1877.

ಇಂಡ್ಯದೇಶದಲ್ಲಿ ವಾಲಂಟಿಯರ್ ಫೌಜಿಗೋಸ್ಕರ ಯೇರ್ಪಟ್ಟ ಕಾರ್ಯಗಳ 5ನೇ ಸೆಕ್ಷನ್ 62ನೇ ಕಲಂ ಅನುಸರಿಸಿ ಬೆಂಗಳೂರು ರೈಫಲ್ ವಾಲಂಟಿಯರ್‌ಗೆ ಕೀರಿವ ಇದರಡಿ ನಮೂದಿಸಲ್ಪಡುವ ಆಫಿಸರ್‌ಗಳಿಗೆ ಅವರವರ ಹೆಸರಿನ ಬಿ ನಮೂದಿಸಿರುವ ಪ್ರಕಾರ ರಜಾ ಕೊಡಲ್ಪಟ್ಟಿದೆ.

ಕೆಪ್ಟನ್. ಟೀಟೆಯವರಿಗೆ 1877ನೇ ಇಸವಿ ಫಿಬ್ರವರಿ 28ನೇ ಮುಕ್ತುಂ ಲಾಗಾಯಿತು 6 ತಿಂಗಳ ರಜಾ.

ಲೆಫ್ಟಿನೆಂಟ್ ಹ್ಯಾಡಕ್‌ಯವರಿಗೆ 1877ನೇ ಫಿಬ್ರವರೀ 21ನೇ ಮುಕ್ತುಂ ಲಗಾಯಿತು 6 ತಿಂಗಳ ರಜಾ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.